JULY 17, 2025

**AKASHAVANI - DHARWAD**

**PRADESH SAMACHARA (KANNADA) 12.00 P.M.**

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

<><><>

**1.** ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ಮನ್ ಕಿ ಬಾತ್ ನಲ್ಲಿ, ವಿಶೇಷವಾಗಿ ಉಲ್ಲೇಖಿಸಿದ ಹಿನ್ನೆಲೆ, ವಿದ್ಯಾರ್ಥಿಗಳಲ್ಲಿ ಆರೋಗ್ಯಕರ ಜೀವನ ಶೈಲಿ ಉತ್ತೇಜಿಸಲು, ಆಹಾರ ಪದಾರ್ಥಗಳಲ್ಲಿ ಬಳಕೆ ಮಾಡಬೇಕಾದ ಎಣ್ಣೆಯ ಪ್ರಮಾಣದ ಬಗ್ಗೆ, ಮಾಹಿತಿ ನೀಡುವ ಫಲಕಗಳನ್ನು ಅಳವಡಿಸುವಂತೆ, ಕೇಂದ್ರ ಮಾಧ್ಯಮಿಕ ಶಿಕ್ಷಣ ಮಂಡಳಿ – ಸಿ.ಬಿ.ಎಸ್.ಇ., ಶಾಲೆಗಳಿಗೆ ಸೂಚಿಸಿದೆ.

<><><>

**2.** ಧಾರವಾಡದ, ಭಾರತೀಯ ತಂತ್ರಜ್ಞಾನ ಸಂಸ್ಥೆ ಐ.ಐ.ಟಿ. ಪ್ರಾಯೋಜಿತ ನಿಧಿ ಯೋಜನೆ ಅಡಿ, ಪ್ರಸಕ್ತ ವರ್ಷ, **71** ಕೋಟಿ ರೂಪಾಯಿ ಮೌಲ್ಯದ, **149** ಯೋಜನೆಗಳು ಸೇರಿದಂತೆ, **5** ಕೋಟಿ ಮೊತ್ತದ, ಸಲಹಾ ಯೋಜನೆಗಳನ್ನು ಸಹ ಪಡೆದುಕೊಂಡಿದೆ ಎಂದು, ಐ.ಐ.ಟಿ.ಯ ಸಂಶೋಧನೆ ಮತ್ತು ಅಭಿವೃದ್ಧಿ ವಿಭಾಗದ ವಿದ್ಯಾಧಿಕಾರಿ, ಪ್ರತ್ಯಾಸ ಭೂಯಿ ತಿಳಿಸಿದ್ದಾರೆ. ಬೆಂಕಿ ತಗುಲಿ ಕಟ್ಟದೊಳಗೆ ಸಿಲುಕಿರುವವರ ಪತ್ತೆಗೆ, ಅಗ್ನಿಶಾಮಕ ದಳಕ್ಕೆ ಡ್ರೋನ್ ಸಿದ್ಧ ಪಡಿಸಲಾಗುತ್ತಿದೆ. ವಿದ್ಯುತ್ ಪ್ರಸರಣ ಮಾರ್ಗ ಹಾಗೂ ಪೈಪ್‌ಲೈನ್ ಮೇಲ್ವಿಚಾರಣೆಗೆ, ರೊಬೋಟ್ ತಯಾರಿಸಲಾಗುತ್ತಿದೆ ಎಂದರು.

<><><>

**3.** ಕರ್ನಾಟಕ, ಮಹಾರಾಷ್ಟ್ರ ಸೇರಿ, ನಾಲ್ಕು ರಾಜ್ಯಗಳ ನಡುವಿನ, ಕೃಷ್ಣ ನದಿ ನೀರು ಹಂಚಿಕೆ ವಿವಾದ ಪರಿಹಾರಕ್ಕಾಗಿ ರಚಿಸಲಾದ, ಕೃಷ್ಣ ಜಲ ವಿವಾದ ನ್ಯಾಯಾಧಿಕರಣದ ಕಾರ್ಯಾವಧಿಯನ್ನು, ಮತ್ತೆ ಒಂದು ವರ್ಷ ವಿಸ್ತರಿಸಿ, ಕೇಂದ್ರ ಸರ್ಕಾರ ಆದೇಶಿಸಿದೆ. ಜಲ ವಿವಾದ ಕುರಿತು, ತನ್ನ ಅಂತಿಮ ವರದಿ ಸಲ್ಲಿಸಲು, ನ್ಯಾಯಾಧಿಕರಣಕ್ಕೆ, **2026**ರ ಜುಲೈ **31**ರ ವರೆಗೆ ಕಾಲಾವಕಾಶ ನೀಡಲಾಗಿದೆ.

<><><>

ಕಾನೂನು ಖಾತೆ ಸಚಿವ ಎಚ್.ಕೆ. ಪಾಟೀಲ, ಬೆಂಗಳೂರಿನಲ್ಲಿ ಪ್ರತಿಕ್ರಿಯಿಸಿ, ಕೃಷ್ಣ ಜಲ ವಿವಾದ ನ್ಯಾಯಾಧಿಕರಣ –**2**ರ ಅವಧಿಯನ್ನು, ಒಂದು ವರ್ಷ ವಿಸ್ತರಿಸುವ, ಕೇಂದ್ರ ಸರ್ಕಾರದ ನಿರ್ಧಾರ, ರಾಜ್ಯಕ್ಕೆ ಆಘಾತ ತಂದಿದೆ, ಎಂದಿದ್ದಾರೆ.

<><><>

**4.** ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರ ತಾಲೂಕಿನ, ರಾಜಘಟ್ಟ ಗ್ರಾಮದಲ್ಲಿ, ಬೌದ್ಧ ನೆಲೆಯ ಕುರಿತಾದ ಸ್ತೂಪಗಳು, ಹಾಗೂ ವಿವಿಧ ಅವಶೇ ’ಗಳು ಪತ್ತೆಯಾಗಿದ್ದು, ಕಾರಣಾಂತರದಿಂದ ಅಪೂರ್ಣಗೊಂಡಿದ್ದ ಉತ್ಖನನಕ್ಕೆ, ಕೇಂದ್ರ ಪುರಾತತ್ವ ಇಲಾಖೆ ಅನುಮೋದನೆಯೊಂದಿಗೆ, ಈಗ ರಾಜ್ಯ ಸರ್ಕಾರದಿಂದ ಮರು ಚಾಲನೆ ನೀಡಲಾಗಿದೆ. ಪ್ರವಾಸೋದ್ಯಮ ಖಾತೆ ಸಚಿವ ಎಚ್.ಕೆ. ಪಾಟೀಲ ಮಾತನಾಡಿ,

<><><>

ಎಚ್.ಕೆ. ಪಾಟೀಲ ಧ್ವನಿ 45 ಸೆಕೆಂದುಗಳು

<><><>

5. ಕಳಿಂಗದ ರಾಜ, ಅಶೋಕನ ಶಿಲಾ ಶಾಸನದ ಮೂಲಕ, ಐತಿಹಾಸಿಕ ಮಹತ್ವ ಪಡೆದಿರುವ, ರಾಯಚೂರು ಜಿಲ್ಲೆ, ಮಸ್ಕಿಯಲ್ಲಿ ನಾಲ್ಕು ಸಾವಿರ ವರ್ಷಗಳ ಹಿಂದೆ ಇಲ್ಲಿ ಜನ ವಸತಿ ಇತ್ತು ಎಂಬ ಕುರುಹುಗಳು ಉತ್ಖನನದ ವೇಳೆ, ಪತ್ತೆಯಾಗಿವೆ. ಅಮೆರಿಕ, ಕೆನಡಾ ಹಾಗೂ ಭಾರತದ, 20 ಜನ ಸಂಶೋಧಕರ ತಂಡ, ಕಳೆದ ಮೂರು ತಿಂಗಳಿಂದ, ಪಟ್ಟಣದ ಮಲ್ಲಿಕಾರ್ಜುನ ಬೆಟ್ಟ, ಬಯಲು ಆಂಜನೇಯ ದೇವಸ್ಥಾನದ ಬಳಿ, ಉತ್ಖನನ ಕೈಗೊಂಡಿದೆ. ಉತ್ಖನನಕ್ಕಾಗಿ 271 ಸ್ಥಳಗಳನ್ನು ಗುರುತಿಸಲಾಗಿದೆ ಎಂದು, ದಿಲ್ಲಿಯ ನೊಯ್ಡಾ ವಿಶ್ವವಿದ್ಯಾಲಯದ ಪ್ರಾಧ್ಯಾಪಕ, ಹೇಮಂತ ಕಡಾಂಬಿ ತಿಳಿಸಿದ್ದಾರೆ.

<><><>

6. ತುಮಕೂರು ಹಾಗೂ ಹಾಸನದಲ್ಲಿ, ತೆಂಗು ಬೆಳೆಗೆ ವ್ಯಾಪಕವಾಗಿ ಹರಡುತ್ತಿರುವ, ಬಿಳಿ ನೊಣ, ಕಾಂಡ ರಸ ಸೋರಿಕೆ, ಹಾಗೂ ಗ್ಯಾನೋಡರ್ಮ ಸೇರಿದಂತೆ, ವಿವಿಧ ಕೀಟ ಮತ್ತು ರೋಗಗಳ ಸಮಸ್ಯೆ ಬಗ್ಗೆ, ಕೇಂದ್ರ ಸಚಿವ ವಿ.ಸೋಮಣ್ಣ ಹೊಸ ದಿಲ್ಲಿಯಲ್ಲಿ, ಕೇಂದ್ರ ಕೃಷಿ ಖಾತೆ ಸಚಿವ, ಶಿವರಾಜಸಿಂಗ್ ಚೌವ್ಹಾಣ ಅವರನ್ನು ಭೇಟಿಯಾಗಿ, ಸಮಾಲೋಚಿಸಿದರು. ತುಮಕೂರು ಜಿಲ್ಲೆ, ತಿಪಟೂರಿನಲ್ಲಿ, 'ಕೇಂದ್ರ ತೆಂಗಿನಕಾಯಿ ಸಂಶೋಧನಾ ಸಂಸ್ಥೆ' ಸ್ಥಾಪಿಸುವ ಅಗತ್ಯದ ಬಗ್ಗೆ, ಮನವರಿಕೆ ಮಾಡಿಕೊಟ್ಟಿದ್ದಾಗಿ ತಿಳಿಸಿದ್ದಾರೆ.

<><><>

7. ಹಾವೇರಿ ಜಿಲ್ಲೆಯಲ್ಲಿ, ಅತ್ಯಧಿಕ ರೈತರ ಆತ್ಮಹತ್ಯೆ ಪ್ರಕರಣಗಳು ವರದಿಯಾಗಿದ್ದು, ಕಾರಣ ಪತ್ತೆ ಮಾಡಲು, ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ, ವಿಶಾಲ ನೇತೃತ್ವದಲ್ಲಿ ಸಮಿತಿ ರಸಲಾಗಿದೆ ಎಂದು, ಜಿಲ್ಲಾ ಉಸ್ತುವಾರಿ ಸಚಿವ ಶಿವಾನಂದ ಪಾಟೀಲ ತಿಳಿಸಿದ್ದಾರೆ.

<><><>

8. "ಹಾವುಗಳನ್ನು ಗೌರವಿಸಿ, ಗಾಬರಿ ಪಡಬೇಡಿ: ನಿಸರ್ಗದ ಮೌನ ರಕ್ಷಕರನ್ನು ಕಾಪಾಡಿ" ಎಂಬುದು, 2025ನೇ ಸಾಲಿನ, ವಿಶ್ವ ಉರಗಗಳ ದಿನಾಚರಣೆ, ಧ್ಯೇಯ. ವನ್ಯಜೀವಿ ಕ್ಷೇಮಪಾಲಕ ಪ್ರೊಫೆಸರ್ ಗಂಗಾಧರ ಕಲ್ಲೂರ, ಭಾರತೀಯ ವನ್ಯಜೀವಿ ಸಂರಕ್ಷಣಾ ಕಾಯ್ದೆ –1972ರ ಅಡಿ ಹಾವುಗಳು, ಕಾನೂನಿನಡಿ ಸಂರಕ್ಷಿತ ಪ್ರಾಣಿ. ಅವುಗಳ ಸಂರಕ್ಷಣೆ ಪ್ರತಿಯೊಬ್ಬರ ಕರ್ತವ್ಯ. ಅವುಗಳಿಗೆ ತೊಂದರೆ ಉಂಟುಮಾಡುವುದು ಶಿಕ್ಷಾರ್ಹ ಅಪರಾಧ ಎಂದು, ಹೇಳಿದರು. ಧಾರವಾಡದ ನಿಸರ್ಗ ಸಂಶೋಧನಾ ಕೇಂದ್ರ – ಎನ್.ಆರ್.ಸಿ. ನಗರದ ಮಾಳಮಡ್ಡಿಯ, ಕೆ.ಇ. ಬೋರ್ಡ್ ಸಂಸ್ಥೆಯ, ಪ್ರೌಢ ಶಾಲೆ ಹಾಗೂ ಸಿ.ಬಿ.ಎಸ್.ಇ. ಪ್ರಾಥಮಿಕ ಮತ್ತು ಪ್ರೌಢ ಶಾಲೆಯಲ್ಲಿ, ವಿಶ್ವ ಹಾವುಗಳ ದಿನಾಚರಣೆ ಹಿನ್ನೆಲೆ, ಕೆರೆಹಾವು ಹಾಗೂ ಆಭರಣ ಹಾವು ಬಳಸಿ, ಮಕ್ಕಳಿಗೆ ಪ್ರಾತ್ಯಕ್ಷಿಕೆ ನೀಡಿ, ಅವರು ಮಾತನಾಡಿದರು.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.

ಹರ್ಷ.